ಶ್ರೀ ಬಿ. ರಾಮಯ್ಯ.—ಸ್ವಾಮಿ. ಈಗಾಗಲೇ ಇದಕ್ಕೆ ಮಂಜೂರಾತಿಯನ್ನು ಕೊಟ್ಟು ಟೆಂಡರನ್ನೂ ಕೂಡ ಕರೆದಿದ್ದೇವೆ. ಆದರೆ ಅಲ್ಲಿ ಸಾಕಷ್ಟು ಜನ ಕಂಟ್ರಾಕ್ಟರ್‌ಗಳು ಬಾರದೇ ಇದ್ದುದರಿಂದ ಇದನ್ನು ಗಮನಿಸಿ ಸರ್ಕಾರದವರೇ ನೇರವಾಗಿ ಈ ಕೆಲಸವನ್ನು ಪ್ರಾರಂಭ ಮಾಡಲು ಶೀಘ್ರ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಮಾನ್ಯ ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

QUESTIONS FOR ANSWERS ON THE DAY
(but not taken up)

Shifting of Wholesale Market to Yeshavanthapur Yard.

829 SRI KADIDAL DIVAKAR (Thirthahalli).—Will the Minister of State for Marketing and Muzarai be pleased to state.—

(a) whether it has come to the notice of Government that during the year 1966, Government after deciding to shift the present Tharagupet to Yeshwanthapur R.M.C. Yard had purchased lands and auctioned them by forming sites;

(b) if so, the reasons for not shifting the present Tharugupet from City Market to Yeshwanthpur ;

(c) the amount of loan paid for the construction of Warehouses by calling tenders at the present Yeshwanthpur Market yard (Particulars to be furnished);

(d) whether it has come to the notice of Government that the said owners of Warehouses are put acute financial hardship, without transacting any business for not shifting market yard ;

(e) whether the Government will postpone the recovery of loan by waiving the payment of interest and penal interest to the said affected persons ?

SRI SUDHENDRA RAO KASABE (Minister of State for Marketing and Muzrai).—

(a) Yes.

(b) The reasons for delay in shifting is that the whole sale Merchants were not willing to shift their business transaction from Transport and they filed writ petitions before the State High Court and Supreme Court.

(c) The following 16 merchants were given loan by the Market Committee to construct warehouses at the Yeshwanthpur Market Yard as noted hereunder.—

12 Merchants	Rs. 35,000	each
2 -do-	Rs. 27,000	each
1 -do-	Rs. 32,000	
1 -do-	Rs. 22,000	

Besides 44 warehouses from the World Bank assistance and 26 warehouses from the Market Committee fund, were consturcted,

(d) The owners of the warehouses are not affected with financial loss as they are now transacting business in Agricultural Products like Potato and Onion etc., at the existing Warehouses of Yeshwanthapur Market Yard. Besides all the merchants should compulsorily transmit their business at the Yeswanthapur Market Yard itself, as per the order of the Supreme Court dated 17-2-1981. Consequent on this, it has become easy for the owners of the Warehouses to shift heir business transactions without any difficulty. Besides the question of financial loss does not arise when compared the cost of construction with the present rates.

(e) This question does not arise.

ಶ್ರೀ ಡಿ. ಟಿ. ರಾಮು. —ಸ್ವಾಮಿ, ಒಂದು ಬಸ್ ಆಕ್ಸಿಡೆಂಟ್ ಬಗ್ಗೆ ನಾನು ಮಾತನಾಡಲು ಅವಕಾಶ ಕೋಡಬೇಕೆಂದು ಮೊನ್ನೆ ದಿವಸ ತಮ್ಮಲ್ಲಿ ಕೇಳಿಕೊಂಡಿದ್ದೆ... ...

ಅಧ್ಯಕ್ಷರು. —ತಾವು ನೋಟಿಸನ್ನೇ ಕಳುಹಿಸಿಕೊಟ್ಟಿಲ್ಲ, ಆದ್ದರಿಂದ ತಮಗೆ ಮಾತಾಡಲು ಅವಕಾಶ ಕೊಡುವುದಕ್ಕೆ ಬರುವುದಿಲ್ಲ.

ವಿಷಯ. —ನಿಯಮ 312ರ ಕೆಳಗೆ ಕಳ್ಳಭಟ್ಟಿ ಸಾರಾಯಿ ಕುಡಿತದಿಂದ ಉಂಟಾದ ಮರಣಗಳ ಬಗ್ಗೆ.

†ಶ್ರೀ ಮಳ್ಳೂರು ಆನಂದರಾವ್ (ರಾಜಾಜಿ ನಗರ).—ಸನ್ಮಾನ್ಯ ಅಧ್ಯಕ್ಷರೆ ಕಳೆದ ೩-೪ ದಿವಸಗಳಿಂದ ಎಲ್ಲರ ಮನಸ್ಸನ್ನೂ ಕಲಕಿರತಕ್ಕ ಮಹಾ ದುರಂತ ಏನು ನಡೆದಿದೆ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಮಾಡಿ ಇದನ್ನು ತಡೆಗಟ್ಟಲಿಕ್ಕೆ ಏನೇನು ಕ್ರಮಗಳನ್ನು ನಾವೆಲ್ಲರೂ ಕೈಗೊಳ್ಳಬೇಕಾದ್ದು ಅಗತ್ಯ ವೆಂದು ನಾನು ಹೇಳಬಯಸುತ್ತೇನೆ.

ಮೊದಲನೆಯದಾಗಿ ಅಧಿಕೃತವಾಗಿ ಇದುವರೆಗೆ ಈ ಕಳ್ಳಭಟ್ಟಿ ಸಾರಾಯಿ ಕುಡಿದು ಸತ್ತವರ ಸಂಖ್ಯೆ ಎಷ್ಟಾಯಿತೆಂಬುದು ಯಾರಿಗೂ ಗೊತ್ತಿಲ್ಲ. ಪತ್ರಿಕೆಗಳಲ್ಲಿ ೩೫೭ ಎಂದು ಇದ್ದರೆ, ಇನ್ನೊಬ್ಬರು ೫೦೦ ಎಂದು ಹೇಳುತ್ತಾರೆ, ಮತ್ತೊಬ್ಬರು ೬೦೦ ಎಂದು ಹೇಳುತ್ತಾರೆ, ಇನ್ನೂ ಕೆಲವರು ೧ ಸಾವಿರಕ್ಕೂ ಹೆಚ್ಚಾಗಿ ಸತ್ತಿದ್ದಾರೆಂದು ಹೇಳುತ್ತಾರೆ. ಆದ್ದರಿಂದ ನಾನು ತಮ್ಮಲ್ಲಿ ಮೊದಲನೆಯದಾಗಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಇದುವರೆಗೆ ಎಷ್ಟು ಜನ ಸತ್ತಿದ್ದಾರೆ, ಎಂಬುದನ್ನು ತಿಳಿಸಬೇಕು. ಏಕೆಂದರೆ ಇಲ್ಲಿ ಸತ್ತವರು ಎಂದರೆ ಕಲವರು ಆಸ್ಪತ್ರೆಗಳಲ್ಲಿ ಸತ್ತಿರಬಹುದು, ಇನ್ನು ಕೆಲವರ ಆಸ್ಪತ್ರೆಗಳಿಗೆ ಶವಗಳನ್ನು ತೆಗೆದುಕೊಂಡು ಹೋಗಿಲ್ಲದೇ ಇರಬಹುದು. ಇದರಲ್ಲಿ ನಮಗೆ ಲೆಕ್ಕ ಸಿಕ್ಕುವುದಿಲ್ಲ. ಆದ್ದರಿಂದ ಇದುವರೆಗೆ ಸ್ಮಶಾನದಲ್ಲಿ ಎಷ್ಟು ಹೆಣಗಳನ್ನು ದಫನ್ ಮಾಡಿದ್ದಾರೆ ಎಂಬುದರ ಒಂದು ಲೆಕ್ಕವನ್ನು ಮಾನ್ಯ ಮಂತ್ರಿಗಳು ತರಿಸಿಕೊಂಡು ನಮಗೆ ತಿಳಿಸಬೇಕು.